ರೇಷ್ಮೆ ಸಚಿವರು ಮತ್ತು ಉದ್ಯಮದ ಭಾಗೀದಾರರ ಪ್ರತಿನಿಧಿಗಳು ಹಾಗೂ ಇಲಾಖಾ ಅಧಿಕಾರಿಗಳೊಂದಿಗೆ ಕೇಂದ್ರದ ಮಾನ್ಯ ಅರ್ಥ ಸಚಿವರು ಮತ್ತು ಮಾನ್ಯ ಕೇಂದ್ರದ ಜವಳಿ ಸಚಿವರುಗಳನ್ನು ದಿ: 27–07–2011 ರಂದು ಭೇಟಿ ಮಾಡಿ ಮನವಿಗಳನ್ನು ಸಲ್ಲಿಸಿ ಕಸ್ಟಂ ಶುಲ್ಕವನ್ನು ಶೇಕಡ 30ಕ್ಕೆ ಹೆಚ್ಚಿಸಲು, ರೇಷ್ಮೆ ಗೂಡಿಗೆ ಬೆಂಬಲ ಬೆಲೆ ನೀಡಲು, ರೇಷ್ಮೆ ಗೂಡಿಗೆ ಪ್ರೋತ್ಸಾಹಧನ ನೀಡಲು ಮತ್ತು ರೇಷ್ಮೆ ಧಾರಣೆ ಸ್ಥಿರಗೊಳಿಸಲು ಸುತ್ತು ನಿಧಿ ನೀಡುವಂತೆ ಪುನಃ ಕೋರಲಾಗಿದೆ.

* ರಾಜ್ಯ ಸರ್ಕಾರವು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗೆ ಮಾರುಕಟ್ಟೆ ಪ್ರವೇಶಿಸಿ ರೇಷ್ಮೆ ಧಾರಣೆ ಸ್ಥಿರಗೊಳಿಸಲು ರೂ. 12.00 ಕೋಟಿ ಹಣವನ್ನು ಬಿಡುಗಡೆ ಮಾಡಿರುವುದಲ್ಲದೆ, ವಾಣಿಜ್ಯ ಬ್ಯಾಂಕುಗಳಿಂದ ರೂ.25.00 ಕೋಟಿ ಸಾಲ ಪಡೆಯಲು ಗ್ಯಾರಂಟಿಯನ್ನು ನೀಡಿದೆ.

* ವಿಷಯದ ಗಂಭೀರತೆಯನ್ನು ಅರಿತು ಸರ್ಕಾರವು ಸಂಕಷ್ಟ ಉಪಶಮನಕ್ಕಾಗಿ ರೇಷ್ಮೆ ಗೂಡಿನ ಧಾರಣೆ ರೂ. 160.00ಕ್ಕಿಂತ ಕಡಿಮೆಯಾದಲ್ಲಿ ಮಾರುಕಟ್ಟೆ ಪ್ರವೇಶಿಸಿ ಪ್ರತಿ ಕೆ.ಜಿ. ರೇಷ್ಮೆ ಗೂಡಿಗೆ ರೂ. 30.00 ರವರಗೆ ಸಹಾಯಧನ ನೀಡಲು ಆದೇಶಿಸಿದೆ. ಈ ಆದೇಶವು ದಿನಾಂಕ:01–11–2011ರಿಂದ ಜಾರಿಗೆ ಬಂದಿದ್ದು ಇದಕ್ಕಾಗಿ ರೂ. 5.00 ಕೋಟಿ ಹಣವನ್ನು ಬಿಡುಗಡೆ ಮಾಡಿದೆ.

* ದಿನಾಂಕ: 21–11–2011 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರೇಷ್ಮೆ ಉದ್ಯಮದ ಭಾಗೀದಾರರ ಸಭೆಯನ್ನು ನಡೆಸಿ ಸಮಸ್ಯೆಗಳ ಕುರಿತು ಚರ್ಚಿಸಲಾಗಿದೆ.

ವಿಷಯ : ವ್ಯಾಟ್ ಪ್ರಮಾಣ

16 (274) ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) :– ಮಾನ್ಯ ಜವಳಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಬೃಹತ್ ಜವಳಿ ಕೈಗಾರಿಕೆಗಳ ಸಂಖ್ಯೆ ಮತ್ತು ಅವುಗಳಲ್ಲಿ ಹೂಡಲಾದ ಬಂಡವಾಳ ಹಾಗೂ ಅವುಗಳು ಸೃಷ್ಟಿಸಿದ ಉದ್ಯೋಗಾವಕಾಶಗಳ ವಿವರಗಳೇನು ?

(ಆ) ಈ ಬೃಹತ್ ಜವಳಿ ಕೈಗಾರಿಕೆಗಳಿಗೆ ಸರ್ಕಾರದವರು ನೀಡುತ್ತಿರುವ ಸೌಲಭ್ಯಗಳೇನು ಹಾಗೂ ಸಬ್ಸಿಡಿ ಮೊದಲಾದ ಸೌಲಭ್ಯಗಳಿಗೆ ಸರ್ಕಾರ ಮಾಡಿದ ವೆಚ್ಚ ಮತ್ತು ಅವುಗಳಿಗೆ ಸರ್ಕಾರ ನೀಡಿದ ಜಮೀನುಗಳ ಕುರಿತಾದ ವಿವರಗಳೇನು?

(ಇ) ಇವುಗಳ ಕರ ಮತ್ತು ಇತರ ರೂಪದಲ್ಲಿ ಸರ್ಕಾರಕ್ಕೆ ಪಾವತಿಸುತ್ತಿರುವ ಆರ್ಥಿಕ ವಿವರಗಳೇನು?

ಶ್ರೀ ಆರ್. ವರ್ತೂರು ಪ್ರಕಾಶ್ (ಜವಳಿ ಸಚಿವರು)

(ಅ) ರಾಜ್ಯದಲ್ಲಿರುವ ಬೃಹತ್ ಜವಳಿ ಕೈಗಾರಿಕೆಗಳ ಸಂಖ್ಯೆ : 09 ಅವುಗಳಲ್ಲಿ ಹೂಡಲಾದ ಬಂಡವಾಳ : ರೂ 3321.00 ಕೋಟಿ ಅವುಗಳು ಸೃಷ್ಟಿಸಿದ ಉದ್ಯೋಗಾವಕಾಶಗಳ ವಿವರ : 28,814.

(ಆ) ಬೃಹತ್ ಜವಳಿ ಕೈಗಾರಿಕೆಗಳಿಗೆ ಸರ್ಕಾರದಿಂದ ಸುವರ್ಣ ವಸ್ತ್ರ ನೀತಿಯಡಿ ಕೈಗಾರಿಕೆಗಳ ಬೇಡಿಕೆ ಆಧರಿಸಿ ವಿಶೇಷ ಆರ್ಥಿಕ ಸೌಲಭ್ಯಗಳನ್ನು ನೀಡಲು ಅವಕಾಶವಿರುತ್ತದೆ. ಇವುಗಳಲ್ಲಿ ಬಂಡವಾಳ ಸಹಾಯಧನ, ಪ್ರವೇಶತೆರಿಗೆ ಸಹಾಯಧನ, ಮುದ್ರಾಂಕ ಶುಲ್ಕ ಸಹಾಯಧನ, ವಿದ್ಯುತ್ ಸಹಾಯಧನ, ತ್ಯಾಜ್ಯ ದ್ರವ್ಯೋಪಚಾರ ಘಟಕದ ಸಹಾಯಧನ, ಕಾರ್ಮಿಕರಿಗೆ ಇಪಿಎಫ್ ಮತ್ತು ಇ.ಎಸ್.ಐ ವಂತಿಕೆ ಸಹಾಯಧನ, ಭೂಮಿ ಸಹಾಯಧನ ಇವೆ ಮುಂತಾದ ಸೌಲಭ್ಯಗಳು ಸೇರಿರುತ್ತವೆ.

(ಇ) ವಾಣಿಜ್ಯ ತೆರಿಗೆ, ಇತ್ಯಾದಿ ರೂ. 99,45,845.00(2010–11)

ಪಜೀರು ಗ್ರಾಮದಲ್ಲಿ SEZ ಯೋಜನೆ

18 (241) ಶ್ರೀ ಯು. ಟಿ. ಖಾದರ್ (ಮಂಗಳೂರು):– ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮಂಗಳೂರಿನ ಪಜೀರು ಗ್ರಾಮದಲ್ಲಿ ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯ ಸ್ಥಾಪನೆಗಾಗಿ ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ (ವರ್ಷ ಮತ್ತು ವಿಸ್ತೀರ್ಣ ಒದಗಿಸುವುದು);

ಆ) ಆರ್ಥಿಕ ವಲಯದಲ್ಲಿ ಸ್ಥಳಾವಕಾಶವನ್ನು ಕೋರಿ ಅರ್ಜಿ ಸಲ್ಲಿಸಿದ ಕಂಪನಿಗಳು ಹಾಗೂ ಮಂಜೂರಾತಿ ಪಡೆದ ಕಂಪನಿಗಳು ಯಾವುವು;